ಹದಿನೆಂಟನೆಯ ಶತಮಾನದ ಕಾದಂಬರಿಕಾರರನ್ನು ಓದಿದ್ದೆ. ಸ್ವಲ್ಪ ಪ್ರಬುದ್ಧಳಾಗುವವರೆಗೆ ಜೇನ್ ಆಸ್ಟೀನ್ (ಇಂಗ್ಲಿಷ್ ಕಾದಂಬರಿಕಾರ್ತಿ) ಆಗಲಿ, ತುರ್ಗನೆವ್ (ರಷ್ಯನ್ ಕಾದಂಬರಿಕಾರ) ಆಗಲಿ ಅಷ್ಟು ಇಷ್ಟವಾಗುತ್ತಿರಲಿಲ್ಲ. ನನ್ನಷ್ಟಕ್ಕೆ ನಾನೇ 'ವುದರಿಂಗ್ ಹೈಟ್ಸ್' ಪುಸ್ತಕ ಹುಡುಕಿಕೊಂಡೆ. ಆ ಪುಸ್ತಕವನ್ನು ಬಹುಶಃ ಹದಿನೈದು ವರ್ಷಗಳು ಪ್ರತಿ ವರ್ಷ ಓದಿದ್ದೆ. ಹೆನ್ರಿ ಜೇಮ್ಸ್ (ಅಮೆರಿಕದ ಕಾದಂಬರಿಕಾರ) ಮತ್ತು ಥಾಮಸ್ ಹಾರ್ಡಿ (ಇಂಗ್ಲಿಷ್ ಕಾದಂಬರಿಕಾರ) ಆಧುನಿಕ ಸಾಹಿತ್ಯಕ್ಕೆ ಪ್ರವೇಶಿಕೆ ಒದಗಿಸಿದರು. ನನ್ನಜ್ಜಿ ಅವರನ್ನು ಒಪ್ಪುತ್ತಿರಲಿಲ್ಲ. ಅವಳ ಪ್ರಕಾರ ಡಿಕನ್ಸ್ (ಇಂಗ್ಲಿಷ್ ಕಾದಂಬರಿಕಾರ) ಆಧುನಿಕ ಸಾಹಿತಿ. ಅವಳಿಗೆ ಥ್ಯಾಕರೆ(ಬ್ರಿಟಿಷ್ ಕಾದಂಬರಿಕಾರ)ಯನ್ನ ಕಂಡರಾಗುತ್ತಿರಲಿಲ್ಲ. ಅವನು ಬಹಳ ಕ್ಷುಲ್ಲಕ ಲೇಖಕ ಎನ್ನುವುದು ಅವಳ ಅಭಿಪ್ರಾಯ. ಮನೆ ಬಿಟ್ಟು ಹೋಗುವವರೆಗೂ ಇದೇ ನಾನು ಕಂಡ ಆಧುನಿಕ ಜಗತ್ತು!

◆ **ಚಿಕ್ಕಂದಿನ ಗ್ರಾಮೀಣ ಬದುಕಿನ ಏಕಾಂತ, ಸಾಹಿತ್ಯಿಕ ಆಸಕ್ತಿಯಿದ್ದ ವಾತಾವರಣ ನಿಮ್ಮನ್ನು ಲೇಖಕಿಯಾಗಿ ರೂಪಿಸಿರಬಹುದು ಅಲ್ಲವೇ?**

ಅದು ರಕ್ತದಲ್ಲೇ ಬಂದಿತ್ತು ಅನ್ನಿಸುತ್ತದೆ. ನಮ್ಮ ಕುಟುಂಬದಲ್ಲಿ ಬಹಳ ದೊಡ್ಡ ಪತ್ರಲೇಖಕರು, ಓದುಗರು, ಕತೆ ಹೇಳುವವರು ಇದ್ದರು. ನನ್ನ ಬದುಕಿನುದ್ದಕ್ಕೂ ಇಂತಹ ವ್ಯಕ್ತಿಗಳ ಮಾತುಗಳನ್ನು ಕೇಳಿದ್ದೇನೆ. ಅವರೆಲ್ಲ ಬಹಳ ಒಳ್ಳೆಯ ಕತೆಗಾರರು. ಪ್ರತಿ ಕತೆಗೂ ಒಂದು ರೂಪ, ಅರ್ಥ ಇರುತ್ತಿತ್ತು.

◆ **ಅವರಲ್ಲಿ ಯಾರಾದರೂ ಪ್ರಸಿದ್ಧ ಬರಹಗಾರರೇ?**

ಓ ಹೆನ್ರಿ (ಅಮೆರಿಕನ್ ಸಣ್ಣಕತೆಗಾರ) ನಿಮಗೆ ಗೊತ್ತಿರಬೇಕಲ್ಲ. ಆತ ನನ್ನಪ್ಪನ ಎರಡನೆಯ ಸೋದರಸಂಬಂಧಿ. ಕುಟುಂಬದಲ್ಲಿ ಆತ ಬ್ಯಾಂಕ್ ದರೋಡೆಕೋರ ಎಂದೇ ಪ್ರಸಿದ್ಧ. ಆತನಿಗೆ ಹಣ ಮಾಡುವುದು ಹೇಗೆ ಅಂತ ಗೊತ್ತಿರಲಿಲ್ಲ. ನಮ್ಮ ಪೋರ್ಟರ್ ಮನೆತನದಲ್ಲಿ ಅದು ಯಾರಿಗೂ ಗೊತ್ತಿಲ್ಲ. ಆತನ ಹೆಂಡತಿಗೆ ಕ್ಷಯರೋಗ. ಚಿಕಿತ್ಸೆಗಾಗಿ ಬ್ಯಾಂಕಿನಿಂದ ಮೂನ್ನೂರೈವತ್ತು ಡಾಲರ್‌ನಷ್ಟು ಸಣ್ಣ ಮೊತ್ತವನ್ನು ಕದ್ದು ಓಡಿಹೋದ. ಹೆಂಡತಿ ಸಾಯುತ್ತಿದ್ದಾಳೆಂದು ಓಡಿಹೋಗಿದ್ದವನು ವಾಪಸ್ಸು ಬಂದು ಜೈಲಿಗೆ ಹೋದ. ಆಮೇಲೆ ಈ ಹೊರೇಸ್ ಪೋರ್ಟರ್ (ಅಮೆರಿಕದ ಸೈನಿಕ ಹಾಗೂ ರಾಜತಾಂತ್ರಿಕ) ಫ್ರಾನ್ಸಿನಲ್ಲಿ ರಾಯಭಾರಿಯಾಗಿದ್ದಾಗ ಎಂಟು ವರ್ಷ ಸತತವಾಗಿ ಜಾನ್ ಪೌಲ್ ಜೋನ್ಸ್‌ನ (ಅಮೆರಿಕೆಯ ನೌಕಾಧಿಕಾರಿ. ಅಮೆರಿಕಾದ ಕ್ರಾಂತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ) ಶವದ ಹುಡುಕಾಟ ನಡೆಸಿದ. ಕಡೆಗೂ ಅದನ್ನು ಕಂಡುಹಿಡಿದು ಮರಳಿ ತಂದು ಅದರ ಮೇಲೆ ಪುಸ್ತಕ ಬರೆದ.

◆ **ನಿಮ್ಮ ಕೃತಿಗಳಲ್ಲಿ ಕಾಣಿಸುವ ಐತಿಹಾಸಿಕ ಪ್ರಜ್ಞೆ ನಿಮ್ಮ ಕುಟುಂಬದ ಪರಂಪರೆಯಿಂದ ನಿಮಗೆ ಬಂದಿರುವುದೇ?**

ನಮ್ಮನ್ನು ಬೆಳೆಸಿದ್ದೇ ನಮ್ಮ ಮನೆಯ ಇತಿಹಾಸದೊಂದಿಗೆ ಗೊತ್ತಾ. ನಮ್ಮಮ್ಮನ ಕುಟುಂಬದವರು ಈ ದೇಶಕ್ಕೆ 1648ರಲ್ಲಿ ಬಂದರು. ವರ್ಜಿನಿಯಾದ ಜಾನ್ ರಾಂಡೋಲ್ಫ್ ಪ್ರದೇಶಕ್ಕೆ ಹೋದರು. ನನ್ನ ಮುತ್ತಜ್ಜನ ಮುತ್ತಜ್ಜ ಜೊನಾಥನ್ ಬೂನ್ ಆತ ಡೇನಿಯಲ್ ಬೂನ್(ಅಮೆರಿಕವನ್ನು ಕಟ್ಟಿದ ಮೊದಲಿಗರಲ್ಲೊಬ್ಬ)ನ ಸೋದರ. ನಮ್ಮ ತಂದೆಯ ಮನೆಯವರು ಕರ್ನಲ್ ಆಂಡ್ರ್ಯೂ ಪೋರ್ಟರ್ ವಂಶದವರು. ಅವರ ತಂದೆ ಪೆನ್ಸಿಲ್ವೇನಿಯಾದ ಮಾಂಟ್ಗೊಮೆರಿಗೆ 1720ರಲ್ಲಿ ಬಂದರು. ಆತ ಜಾರ್ಜ್ ವಾಷಿಂಗಟನ್ ಜೊತೆ ಕ್ರಾಂತಿಯಲ್ಲಿ ಭಾಗವಹಿಸಿದ್ದ. ಆತ 1809ರಲ್ಲಿ ನಿಧನರಾಗುವುದಕ್ಕೆ